# ಧಾರಾವಾಹಿ ನಿರ್ಮಿಸುವೆ



**ಆಶಿತಾ ಚಂದ್ರಪ್ಪ**

**ಉದಯದ 'ಸುಂದರಿ'ಯ ಐಪಿಎಸ್ ಶಾಲಿನಿ**

★ *ಶಾಲಿನಿಯಾದ ಮೇಲೆ 'ಸುಂದರಿ' ಹಿಟ್ ಆಯಿತಂತೆ ಹೌದಾ?*

ಅದು ನನಗೆ ಗೊತ್ತಿಲ್ಲ. ವೀಕ್ಷಕರು ನನ್ನನ್ನು ಒಪ್ಪಿಕೊಂಡಿದ್ದಾರೆ. ಅದಕ್ಕೆ ನಾನು ಕೃತಜ್ಞಳು. ಮೃದು ಸ್ವಭಾವದ ಶಿಕ್ಷಕಿ ಪಾತ್ರದಿಂದ ಬಂದಾಗ ಒಂದು ಸಣ್ಣ ಅಳುಕು ಇತ್ತು. ಅದು ಈಗ ಇಲ್ಲದಂತಾಗಿದೆ. ಪಾತ್ರವನ್ನು ಒಂದು ತಿಂಗಳ ಹಿಂದಷ್ಟೇ ಪ್ರವೇಶ ಮಾಡಿದ್ದೇನೆ. ಮುಂದೆ ಹೇಗೆ ಸಾಗುತ್ತೋ ನೋಡೋಣ.

★ *ನಟನೆ ಆರಂಭವಾಗಿದ್ದು ಹೇಗೆ?*

ನಟಿಯಾಗುವ ಯೋಚನೆ ಇರಲಿಲ್ಲ. ಇದು ಆಕಸ್ಮಿಕ. ಝಿ ಕನ್ನಡದ 'ಜೊತೆ ಜೊತೆ'ಯಲಿ ಅವಕಾಶ ಸಿಕ್ಕಿತು. ಮನೆಯಲ್ಲಿ ಆರಂಭದಲ್ಲಿ ಇದಕ್ಕೆ ಪ್ರತಿರೋಧ ಮಾಡಿದರು. ಅವರಿಗೆ ನಟಿಯಾಗುವುದಕ್ಕಿಂತ ಎಂಜಿನಿಯರ್ ಆಗಬೇಕಿತ್ತು. ನನಗೂ ಅಳುಕಿತ್ತು. ಆದರೆ ಅಭಿನಯಿಸುವ ಆಶೆಯಿತ್ತು. ನನಗಿದ್ದ ಅಳುಕೆಂದರೆ ಭಾಷೆಯದು. ನಾನು ಓದಿದ್ದೆಲ್ಲಾ ಇಂಗ್ಲಿಷ್ ಮಾಧ್ಯಮದಲ್ಲಿ. ಹೀಗಿರುವಾಗ ಅಸ್ಖಲಿತ ಗ್ರಂಥಸ್ಥ ಭಾಷೆಯ ಹಿಡಿತ ಇರಲಿಲ್ಲ. ಮನೆ ಮಾತು ಕೂಡ ತೆಲುಗು. ಒಂದು ಪ್ರಯತ್ನ ಎಂದು ಪ್ರವೇಶ ಮಾಡಿದೆ. ಈಗ ಹಿಂದಿರುಗುವ ಮಾತೇ ಇಲ್ಲ.

★ *ನಿಮ್ಮ ಆಸಕ್ತಿಗಳೇನಾಗಿತ್ತು?*

ಹೊಸತರ ತುಡಿತ ನನ್ನಲ್ಲಿ ಮಿಡಿಯುತ್ತಿತ್ತು. ಇದೇ ಕಾರಣಕ್ಕೆ ಒಲ್ಲದ ಮನಸ್ಸಿನಿಂದ ಬಿಎಂಎಸ್ ಕಾಲೇಜ್‌ನಲ್ಲಿ ಎಲೆಕ್ಟ್ರಾನಿಕ್ಸ್ ಬಿಇ ಮಾಡಿದೆ. ಅದಾದ ಮೇಲೆ ನನಗೆ ಫ್ಯಾಷನ್ ಡಿಸೈನ್ ಮಾಡುವ ಬಯಕೆ ಕಾಡಿತು. ಅದಕ್ಕೆ ಬೇಕಾಗುವ ಸಿದ್ಧತೆಯನ್ನು ಮಾಡಿಕೊಂಡು ನನ್ನ ಸ್ನೇಹ ವಲಯಕ್ಕೆ ಅದನ್ನು ಪರಿಚಯಿಸಿದೆ. ನಟರಾದ ದರ್ಶನ್, ಸುದೀಪ್ ಮೊದಲಿನಿಂದ ಪರಿಚಿತರು ಅವರಿಗೆ ಸೇರಿದಂತೆ ತೆಲುಗು ಸಿನಿಮಾದ ಕೆಲವು ನಟರಿಗೆ ಡ್ರೆಸ್ ಡಿಸೈನ್ ಮಾಡಿದೆ. ಇದೇ ಹೊತ್ತಲ್ಲಿ ಟಿವಿಯಲ್ಲಿ ನಟಿಸುವ ಅವಕಾಶ ಬಂತು.

★ *ಸಿನಿಮಾ ಲೋಕದ ಪರಿಚಯ ನಿಮಗಾಗಿದ್ದು ಹೇಗೆ?*

ನನ್ನ ಅಪ್ಪ ಚಂದ್ರಪ್ಪ. ತೀರ್ಥಹಳ್ಳಿ ಮೂಲದವರು. ಅವರು ಸಿನಿಮಾ ನಿರ್ಮಿಸುತ್ತಾರೆ. ಅಮ್ಮ ಚಿತ್‌ಕಲಾ ಗೃಹಿಣಿ. ಅವರ ತವರು ಮದ್ದೂರು. ನನಗೆ ಮನೆಯಲ್ಲಿ ಇರುವುದು ಇಷ್ಟವೇ ಆಗುವುದಿಲ್ಲ. ನಿರಂತರ ಕೆಲಸ ಮಾಡುವ ಹವ್ಯಾಸ. ಬಿಡುವು ಇದ್ದಾಗೆಲ್ಲ ತಂದೆಯ ಕಚೇರಿಗೆ ಹೋಗುತ್ತೇನೆ. ಏನಾದರೂ ಕೆಲಸ ಮಾಡುತ್ತೇನೆ. ಹಾಗೆಂದು ತಾಯಿಯ ಕೆಲಸಕ್ಕೆ ಸಹಾಯ ಮಾಡುವುದಿಲ್ಲ ಅಂತಾನೂ ಅಲ್ಲ. ಆದರೆ ಅದು ತೀರಾ ಕಡಿಮೆ. ಅಡುಗೆ ಮಾಡುವುದೂ ಗೊತ್ತು. ಆದರೆ ನನಗೆ ಹೊರಗಿದ್ದು ದುಡಿಯುವ ಹಂಬಲ.

ತಂದೆ ಸಿನಿಮಾ ಉದ್ಯಮದಲ್ಲಿದ್ದರೂ ನಾನು ಅವರ ಪ್ರಭಾವ ಹೆಸರನ್ನು ಬಳಸಿ ನಟಿಯಾಗಿಲ್ಲ. ಅವರ ನಿರುತ್ಸಾಹದ ನಡುವೆಯೂ ಸ್ವ ಉತ್ಸಾಹದಿಂದ ಬಣ್ಣ ಹಚ್ಚಿದ್ದೇನೆ. ಮುಂದೆ ನಾನೇ ನಿರ್ಮಾಣ ನಿರ್ದೇಶನವನ್ನೂ ಮಾಡುವ ಉದ್ದೇಶ ಇದೆ. ಈಗಲೇ ಆ ಬಗ್ಗೆ ಯಾವ ಸ್ಪಷ್ಟ ಯೋಜನೆಯನ್ನು ಹಾಕಿಕೊಂಡಿಲ್ಲ. ಸಮಯ ಎಲ್ಲವನ್ನೂ ನಿಭಾಯಿಸುತ್ತದೆ ಎನ್ನುವ ಅಚಲ ನಂಬಿಕೆ ಮಾತ್ರ ಇದೆ.

★ *ಸಿನಿಮಾದಲ್ಲಿ ನಟಿಸುವುದಿಲ್ಲವೇ?*

ಹಾಗೇನೂ ಇಲ್ಲ. ಸದ್ಯ ಇಲ್ಲಿ ತುಂಬಾ ಖುಷಿಯಿಂದ ಇದ್ದೇನೆ. ಮನೆಯ ವಾತಾವರಣ ಸಿಕ್ಕಿದೆ. ಸಿನಿಮಾದಲ್ಲೂ ನಟಿಸಬೇಕು. ಯಾವುದಕ್ಕೂ ಅವಸರ ಇಲ್ಲ. ಶಿವಣ್ಣನ ತಂಗಿ ಪಾತ್ರವನ್ನು ನಿರ್ವಹಿಸಬೇಕು ಎನ್ನುವ ದೊಡ್ಡ ಬಯಕೆ ಇದೆ. ನಟಿಸುವುದು ನೋಡಿದಷ್ಟು ಸುಲಭದ ಸಂಗತಿಯಲ್ಲ. ಇದಕ್ಕೂ ಸಾಕಷ್ಟು ಕಲಿಯಬೇಕು. ಶ್ರಮ ಶ್ರದ್ಧೆಯೂ ಬೇಕಾಗುತ್ತದೆ.

★ *ಪೊಲೀಸ್ ಅಧಿಕಾರಿಯಾಗಿ ಹೇಗೆನಿಸುತ್ತದೆ?*

ಸಮವಸ್ತ್ರ ಧರಿಸುವಾಗಲೇ ತುಂಬಾ ಭಯವಾಗುತ್ತದೆ. ಏಕೆಂದರೆ ಎಲ್ಲಿ ಏನು ತಪ್ಪಾಗುತ್ತೋ ಎನ್ನುವ ಆತಂಕ. ಈ ಮೊದಲು ನಾನು ಕಿರಣ್ ಬೇಡಿ ಬಗ್ಗೆ ಓದಿ ತಿಳಿದುಕೊಂಡಿದ್ದೆ. ಅವರ ಕಾರ್ಯವೈಖರಿ ನೆನಸಿದರೆ ಈಗಲೂ ಮೈಯಲ್ಲಿ ಜುಮ್ಮೆನ್ನುವ ಅನುಭವವಾಗುತ್ತದೆ. ಅಧಿಕಾರ ಎನ್ನುವುದು ಅನುಭವಿಸುವುದಲ್ಲ ಜವಾಬ್ದಾರಿಯನ್ನು ನಿರ್ವಹಿಸುವುದು. ಇಲ್ಲಿ ಅದು ತಮಾಷೆಯ ಸಂಗತಿಯೂ ಅಲ್ಲ. ಇದನ್ನು ಗಮನದಲ್ಲಿ ಇಟ್ಟುಕೊಂಡು ಪಾತ್ರಕ್ಕೆ ನ್ಯಾಯ ನೀಡುವ ದೃಷ್ಟಿಯಲ್ಲಿ ಶಾಲಿನಿಯಾಗಿದ್ದೇನೆ.

★ *ನಿಮಗೆ ಖುಷಿ ಕೊಡುವ ಬೇರೆ ಹವ್ಯಾಸಗಳೇನು?*

ಪ್ರವಾಸ ಚಾರಣ ತುಂಬಾ ಖುಷಿ ಕೊಡುವ ಸಂಗತಿ. ಹೀಗಾಗಿ ಸುತ್ತಾಡುವುದು ನನ್ನ ನೆಚ್ಚಿನ ಹವ್ಯಾಸ. ಓದುವುದನ್ನೂ ಪ್ರೀತಿಸುತ್ತೇನೆ. ನನಗೆ ಸಮಯವನ್ನು ವಿನಾಕಾರಣ ಹರಣ ಮಾಡುವುದು ಇಷ್ಟವಾಗುವುದಿಲ್ಲ. ಏನಾದರೂ ಹುಡುಕಿ ಅದರಲ್ಲಿ ತಲ್ಲೀನಳಾಗುತ್ತೇನೆ.

■ ರಾಗು